ಅನೇಕ ಜನ ಮಾಂಸಾಹಾರಿಗಳಾಗಂತ್ತಿದ್ದಾರೆ. ಇದರಿಂದಾಗಿ ಮಾಂಸದ ಬೆಲೆ ಕೆ.ಜಿ.ಗೆ ೪೦–೫೦ ರೂಪಾಯಿಗೆ ಆಗುತ್ತಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.–ಈಗ ಮಾಂಸಾಹಾರಿಗಳು ಸಸ್ಯಾಹಾರಿಗಳಾಗುತ್ತಿದ್ದಾರೆ ಸಸ್ಯಾಹಾರಿಗಳು ಮಾಂಸಾಹಾರಿಗಳಾಗುತ್ತಿದ್ದಾರೆ.

ಶ್ರೀ ಯು. ಭೂಪತಿ.—ನಿಮ್ಮ ಸರಕಾರದಲ್ಲಿ ಕಾಯಿಪಲ್ಲೆ ಬೆಲೆ ಜಾಸ್ತಿಯಾಗಿದೆ ಆದುದರಿಂದಾಗಿ ಮಾಂಸಾಹಾರಿಗಳ ಸಂಖ್ಯೆ ಜಾಸ್ತಿಯಾಗಿದೆ.

ಶ್ರೀ ಕೃಷ್ಣ.—ಶುಚಿತ್ವವನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಗೋಹತ್ಯೆ ನಿಷೇದ ಕಾನೂನು ಏನು ಇದೆ ಅದರ ಪ್ರಕಾರ ಗೋಹತ್ಯೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಕೆಲವರು ಸಸ್ಯಾಹಾರಿಗಳು ಇರಬಹುದು ಅವರು ಮಾಂಸಾಹಾರಿಗಳ ಮೇಲೆ ಅವರ ಭಾವನೆಯನ್ನು ಹೇರುವುದಕ್ಕೆ ಆಗುವುದಿಲ್ಲ. ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಅವರ ಭಾವನೆಗಳನ್ನಾಗಲೀ ಇಲ್ಲವೇ ಬೇರೊಬ್ಬರ ಹೆಸರಿನಲ್ಲಿಯಾಗಲೀ ಅವರ ಭಾವನೆಗಳನ್ನು ಹೇರುವುದಕ್ಕಾಗುವುದಿಲ್ಲ. ವಾಸ್ತವಾಂಶವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಎಳಿಕರು ಹಸುಗಳನ್ನು ಕಡಿಯುತಕ್ಕಂತಹ ಕೆಲಸ ನಡೆಯುತ್ತದೆ ಎಂಬ ತಪ್ಪು ಕಲ್ಪನೆಯಿಂದ ಚಳುವಳಿಯಾಗುತ್ತಿದೆ. ಗೋಹತ್ಯೆಗೆ ಇಲ್ಲಿ ಅವಕಾಶವಾಗುವುದಿಲ್ಲ ಇದನ್ನು ಮಾಡಿದ ಉದ್ದೇಶ ಮಾಂಸದ ಶುಚಿತ್ವವನ್ನು ಕಾಪಾಡಬೇಕೆಂದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ನನಗೆ ಬರುವುದಿಲ್ಲ. ಜನತಾ ಸರಕಾರ ಹಿಂದೂಗಳ ಭಾವನೆಯನ್ನು ಅರ್ಥ ಮಾಡಿಕೊಳ್ಳದೆ ಓಟಿನ ಕಾರಣಕ್ಕೋಸ್ಕರ ಇಲ್ಲವೇ ಬೇರೆ ಕಾರಣಕ್ಕೋಸ್ಕರ ಲಕ್ಷಾಂತರ ಹಸಂಕರುಗಳನ್ನು ಕೊಲೆ ಮಾಡುವಂತಹ ಪ್ರಯತ್ನವನ್ನು ನಿಲ್ಲಿಸ ಬೇಕು. ಮಹಾತ್ಮಾಗಾಂಧೀಜಿಯವರ ಆದರ್ಶವನ್ನು ಮುರಿದು ಮಾಡುತ್ತಿರುವ ನಿಮ್ಮ ಸರಕಾರಕ್ಕೆ ಧಿಕ್ಕಾರವೆಂದು ಪ್ರತಿಭಟನೆ ಮಾಡಿ ನಾನು ಹೊರಗಡೆ ಹೋಗುತ್ತೇನೆ. ವಿನಾಶ ಕಾಲೇ ವಿಪರೀತ ಬುದ್ದಿ ಎಂಬಂತೆ ನಿಮ್ಮ ವಿನಾಶಕ್ಕೆ ನೀವೇ ಅವಕಾಶ ಮಾಡಿಕೊಡುತ್ತಿದ್ದೀರಿ, ಇದನ್ನು ಪ್ರತಿಭಟಿಸಿ ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

೩. ಮಂಗಳೂರು ಹಳೆಯ ಬಂದರಿನ ಯೋಜನೆ ಅಭಿವೃದ್ಧಿ ಬಗ್ಗೆ ತೋರಿಸಿದ ನಿರ್ಲಕ್ಷ್ಯತನದಿಂದ ಉಂಟಾಗಿರುವ ಪ್ರಾಣಹಾನಿ ಮತ್ತು ಆಸ್ತಿ ನಷ್ಟದ ಬಗ್ಗೆ

ಅಧ್ಯಕ್ಷರು.–ಈಗ ಮಾನ್ಯ ಮೊಯಿಲಿಯವರು ಮತ್ತು ಶ್ರೀಮತಿ ನಾಗರತ್ನಮ್ಮ ಹಾಗೂ ಇನ್ನೂ ಮುಂತಾದವರ ಸಹಿಯಿರುವ ಕಾಲಿಂಗ್ ಅಟೆನ್‌ಷನ್ ಇದೆ. ಇದನ್ನು ೧೩ ರಂದು ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅಲ್ಲಿ ದಿನಕ್ಕೆ ಒಂದೊಂದು ಬೋಟ್ ಮುಳುಗಂತ್ತಿದೆ. ಒಂದೆ ಬೋಟ್‌ಗೆ ೪೦ ಲಕ್ಷ ರೂಪಾಯಿಯಾಗುತ್ತದೆ ಅವರಂ ನಾಳೆಯಿಂದ ಅನಿರ್ಧಿಷ್ಟ ಕಾಲ ಮುಷ್ಕರ ಮಾಡ ಬೇಕೆಂದು ಇದ್ದಾರೆ. ಅನೇಕ ಮೀನುಗಾರರು ಸಾಯುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಯು ವಹಿವಾಟು ನಿಲ್ಲುತ್ತಿದೆ.

ಅಧ್ಯಕ್ಷರು.—ನಿಯಮ ೩೩ರ ಪ್ರಕಾರ ತಮಗೆ ಅವಕಾಶ ಕೊಡುತ್ತೇನೆ. ಇಂದೇ ಪ್ರಸ್ತಾಪ ಮಾಡಿ. ತಮಗೆ ಉತ್ತರ ೧೩ನೇ ತಾರೀಖು ಸಿಗುತ್ತದೆ. ಮಾನ್ಯ ಮಂತ್ರಿಗಳಿಗೆ ಆರೋಗ್ಯ ಸರಿ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ —ಉತ್ತರ ಕೊಡುವಂಥಾದ್ದನ್ನು ೧೩ನೇ ತಾರೀಖಿಗೆ ಕೊಡಲಿ. ಆದರೆ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಅದರ ಗಂಭೀರತೆಯ ಮತ್ತು ತೀಪ್ರತೆಯ ವಿಚಾರವನ್ನು ನಾವು ಹೇಳಬೇಕು. ಏತಕ್ಕೆಂದರೆ ಅಲ್ಲಿ ದಿನಕ್ಕೊಂದು ಬೋಟ್ ಸಮುದ್ರದಲ್ಲಿ ಮುಳುಗು

ತ್ತಿದೆ. because of negligence of the Government. ಇದು ಅವರ ಜೀವನದ ಪ್ರಶ್ನೆ It is a law and order problem.

(ಗೊಂದಲ)

ಅಧ್ಯಕ್ಷರು.—ಈಗ ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ, ತಾವು ಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದೀರಿ. ಸರ್ಕಾರದ ಗಮನಕ್ಕೆ ತರಬೇಕಂ ಎಂದು ಇದ್ದರೆ ಅದನ್ನು ನಿಯಮ ೩೩ರಲ್ಲಿ ಓದಿ ಹೇಳಿ. ಅದಕ್ಕೆ ಉತ್ತರವನ್ನು ೧೫ನೇ ತಾರೀಖಿಗೆ ಕೊಡಿಸುತ್ತೇನೆ.

(ಗೊಂದಲ)

ಶ್ರೀ ಬಿ. ಎಂ. ಇದಿನಬ್ಬ.—ನನ್ನ ಕ್ಷೇತ್ರದಲ್ಲಿ ಆದದ್ದರ ಬಗ್ಗೆಯೂ ೩೩ರಲ್ಲಿ ಓದಿ ಹೇಳಿದ್ದೇನೆ, ಏನೂ ಪ್ರಯೋಜನವಾಗಿಲ್ಲ.

(ಗೊಂದಲ)

ಅಧ್ಯಕ್ಷರು.—ನೀವು ಹೇಳಿದ್ದಂಥದ್ದನ್ನು ೩೩ರ ಪ್ರಕಾರ ಹೇಳಿ ಈಗ ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ನಾಳೆಯಿಂದ ಕರಾವಳಿಯ ಎಲ್ಲಾ ಮೀನುಗಾರರು ಅನಿರ್ಧಿಷ್ಟ ಕಾಲ ಮುಷ್ಕರವನ್ನು ಹೂಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಈ ರೀತಿ ಎಲ್ಲರೂ ಎದ್ದು ಮಾತನಾಡಿದರೆ ಹೇಗೆ ?

ಶ್ರೀಮತಿ ಮಂಜೂರಮ್ಮ ಪದ್ಮರಾಜ್.—ನಾಳೆಯಿಂದ ಮೀನುಗಾರರು ಅನಿರ್ಧಿಷ್ಟ ಕಾಲ ಮುಷ್ಕರವನ್ನು ಹೂಡುತ್ತಿದ್ದಾರೆ, ಅವರಿಗೆ ಮುಖ್ಯಮಂತ್ರಿಗಳಿಂದ ಒಂದು ಸಂದೇಶವನ್ನು ಅವರೂ ಕೊಡಿಸಿ.

(ಗೊಂದಲ)

ಅಧ್ಯಕ್ಷರು.—ಮಂತ್ರಿಗಳು ಇಲ್ಲ. ೧೫ನೇ ತಾರೀಖಿಗೆ ಉತ್ತರ ಕೊಡಿಸುತ್ತೇನೆ

(ಗೊಂದಲ)

ಶ್ರೀ ಸಿದ್ದರಾಮಯ್ಯ.—ಅವರು ತರುತ್ತಿರತಕ್ಕಂಥ ವಿಚಾರ ಹೆಚ್ಚು ಗಂಭೀರವಾಗಿರತಕ್ಕಂಥದ್ದು ಸಾರ್ವಜನಿಕವಾಗಿ...

(ಗೊಂದಲ)

ಅಧ್ಯಕ್ಷರು.—ಸಂತೆಯಲ್ಲಿ ಮಾತನಾಡುವ ಹಾಗೆ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ? ಹೀಗೆ ನಾಲ್ಕೈದು ಮಂದಿ ಒಟ್ಟಿಗೆ ಮಾತನಾಡಿದರೆ ಹೇಗೆ? ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ, ಮಂತ್ರಿಗಳು ೧೫ನೇ ತಾರೀಖಿಗೆ ಬರುತ್ತಾರೆ, ಅವರ ಮೈಯಲ್ಲಿ ಆರಾಮ್ ಇಲ್ಲ ಅವರು ಬಂದಮೇಲೆ ಉತ್ತರವನ್ನು ಕೊಡಿಸುತ್ತೇನೆ. ಇದಕ್ಕೆ ಅವರೇ ಉತ್ತರವನ್ನು ಕೊಡಬೇಕಾಗುತ್ತದೆ. ಇವತ್ತೇ ಅದನ್ನು ಬೇಕಾದರೆ ಸದನದ ಗಮನಕ್ಕೆ ತೆಗೆದುಕೊಂಡು ಬನ್ನಿ, ಉತ್ತರ ೧೫ನೇ ತಾರೀಖಿಗೆ ಕೊಡುತ್ತಾರೆ ಈಗ ನಿಯಮ ೩೩ಳ, ಬಿ. ಆರ್. ನೀಲಕಂಠಪ್ಪನವರು

(ಗೊಂದಲ)

ಅಧ್ಯಕ್ಷರು.—ಈ ರೀತಿ ಐದು ಮಂದಿ ಒಟ್ಟಿಗೆ ಮಾತನಾಡಿದರೆ ಯಾರದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ —ಇದು ಪಟೇಲರಿಗೆ ಗೊತ್ತಿರಬಹುದು, ಅಲ್ಲಿ ದಿನಕ್ಕೊಂದು ಬೋಟ್ ಮುಳುಗುತ್ತಿದೆ. ಅದು ೫೦-೬೦ ಲಕ್ಷ ರೂಪಾಯಿ ಬೆಲೆ ಬಾಳುವಂಥಾದ್ದು. ಈ ರೀತಿ ಕೋಟ್ಯಾಂತರ ರೂಪಾಯಿ ನಷ್ಟವನ್ನು ಅಲ್ಲಿನ ಮೀನುಗಾರರು ಅನುಭವಿಸುತ್ತಿದ್ದಾರೆ. ನಾಳೆಯಿಂದ ಮತ್ತೆ ಅನಿರ್ದಿಷ್ಟ ಕಾಲಾವಧಿಯವರೆಗೆ ಕರಾವಳಿಯ ಮೀನುಗಾರರು ಮುಷ್ಕರವನ್ನು ಹೂಡುತ್ತಿದ್ದಾರೆ. This may give rise to law and order problem. On the floor of this House you please give an assurance that their problem will be solved. ಕೊನೆಯಪಕ್ಷ ಅವರಿಗೆ ಒಂದು ಆಶ್ವಾಸನೆಯನ್ನಾದರೂ ಕೊಡಲಿ. ಏಕೆಂದರೆ ಅವರು ನಾಳೆಯಿಂದಲೇ ಮುಷ್ಕರವನ್ನು ಹೂಡುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಇದನ್ನು ನಾನು ಒಪ್ಪುತ್ತೇನೆ. But we will have to make a statement on that, ಇದು ತಮಗೂ ಗೊತ್ತಿದೆ.

ಅಧ್ಯಕ್ಷರು.—ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಸಚಿವರು ದೇವೇಗೌಡರು

ಶ್ರೀ ಆರ್. ಸಿದ್ದರಾಮಯ್ಯ.—ಇವರು ತರತಕ್ಕಂಥ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ನಾಳೆ...

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್ —ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ I have no objection. But the reply will be given later by the concerned Minister.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅದಕ್ಕೆ ಹೇಳಿದೆ, ಇದು ಮಂಗಳೂರಿನ ಹಳೆಯ ಬಂದರಿನ ಯೋಜನೆ ದೋಣಿಗಳು ಮುಳುಗಿರುವ ವಿಚಾರ.ಮಳೆಗಾಲದಲ್ಲಿ ಅನೇಕ ದೋಣಿಗಳು ಮುಳುಗಿವೆಯಷ್ಟು ಆಸ್ತಿ ನಷ್ಟವಾದ ವಿಚಾರದ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡುತ್ತೇನೆ. ಸುಮಾರು ೧೨ ಕೋಟಿ ರೂಪಾಯಿ ಯೋಜನೆ ಮಂಜೂರಿಯಾಗಿದೆ. ಡ್ರೆಡ್ಜಿಂಗ್ ಯೋಜನೆ ಕಂಪ್ಲೀಟ್ ಮಾಡಬೇಕು. ಏಳನೇ ಯೋಜನೆ ಮುಗಿಯುತ್ತಾ ಬಂತು, ೧೦ ಕೋಟಿ ರೂಪಾಯಿಗಳನ್ನು ಏಳನೇ ಯೋಜನೆ ಅವಧಿಯಲ್ಲಿ ಖರ್ಚು ಮಾಡಬೇಕಾಗಿತ್ತು, ಇದು ರಾಜ್ಯ ಸರ್ಕಾರದ ಯೋಜನೆ, ಆದರೆ ಒಂದು ನಯಾಪೈಸಾ ಕೂಡಾ ಈ ಯೋಜನೆ ಬಗ್ಗೆ ಹತ್ತು ಕೋಟಿ ರೂಪಾಯಿಯಲ್ಲಿ ಖರ್ಚು ಮಾಡಿಲ್ಲ. ಪ್ರತಿ ವರ್ಷ ಅನೇಕ ಮಂತ್ರಿಗಳು ಬಂದರಂ ಸಂಬಂಧಪಟ್ಟ ಮೀನುಗಾರಿಕಾ ಸಚಿವರು ಅಲ್ಲಿಗೆ ಭೇಟಿ ಕೊಡುತ್ತಾರೆ, ಒಂದು ಆಶ್ವಾಸನೆಯನ್ನು ಕೊಡುತ್ತಾರೆ ವಾಪಸ್ ಬರುತ್ತಾರೆ. ಇಪತ್ತಿನವರೆಗೂ ಕೂಡ ಯಾವ ಕಾರ್ಯಕ್ರಮವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಇದರಿಂದ ಮೀನುಗಾರರು ಸಂಪೂರ್ಣವಾಗಿ ಅತೃಪ್ತರಾಗಿದ್ದಾರೆ. ಅವರ ರಕ್ತ ಕುದಿಯುತ್ತಿದೆ. ಯಾಕೆಂದರೆ ಅನೇಕ ಜನರ ಪ್ರಾಣ ನಷ್ಟ ಆಗುತ್ತಿದೆ. ನೋಟ ನೋಡುತ್ತಿರುವಂತೆ ಬೋಟ್ ಮುಳುಗುತ್ತಿದೆ. ಏನ್ನೆ ಮೊನ್ನೆಯ ದಿವಸ ನಾನು ಹೇಳಿದ ಪ್ರಕಾರ ಅಲ್ಲಿನ ಅಡಪಿಯಲ್ಲಿ ಹೊಯಿಗೆ ಸೇರಿ ಡ್ರೆಡ್ಜಿಂಗ್ ಇಲ್ಲದೆ ಅಲ್ಲಿ ಬೋಟ್ ಹೋದ ಕೂಡಲೇ ಮುಳುಗಡೆ ಆಗಿ ಹೋಗುತ್ತಿದೆ. ಅನೇಕ ಜನ ಸಾಯುತ್ತಿದ್ದಾರೆ, ವರ್ಷ ವರ್ಷ ಕಡಿಮೆ ಪಕ್ಷ ೧೦ ಬೋಟ್ ಮುಳುಗಡೆ ಆಗುತ್ತಿದೆ. ೧೦ ಬೋಟ್ ಅಂದರೆ ಒಂದೊಂದು ಬೋಟ್‌ಗೆ ಸುಮಾರು ೧೦ ಲಕ್ಷ ರೂಪಾಯಿಗಳಾಗುತ್ತದೆ. ೫೦-೬೦ ಕೋಟಿ ರೂಪಾಯಿ ಮೀನುಗಾರರ ವಹಿವಾಟು ನಡೆಯತಕ್ಕ ಪ್ರದೇಶ ಅದು. ಅಲ್ಲಿ ಮೀನುಗಾರರದ್ದು ಸಾಕಷ್ಟು ವಹಿವಾಟು ಇರುತ್ತದೆ. ಇದರಿಂದ ಅವರ ಉತ್ಪತ್ತಿಗೆ ತೊಂದರೆ ಆಗುತ್ತದೆ. ಅವರ ಜೀವನೋಪಾಯಕ್ಕೆ ದಾರಿ ಇಲ್ಲ. ನಾಳೆಯಿಂದ ಅವರು ಅನಿರ್ದಿಷ್ಟ ಅವಧಿಯ ತನಕ ಮುಷ್ಕರಕ್ಕೆ ಹೋಗುತ್ತಿದ್ದಾರೆ, ರೋಷದಿಂದ ಸಿಟ್ಟಿನಿಂದ ಅಲ್ಲಿನ ಮೀನುಗಾರರಂ ಮುಷ್ಕರಕ್ಕೆ ಹೋದರೆ ಯಾವ ಪರಿಸ್ಥಿತಿ ಉಂಟಾಗಬಹುದೆಂಬುದು ತಮಗೆ ಗೊತ್ತಿದೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಉದ್ಭವವಾಗಬಹುದು. ಆದ್ದರಿಂದ ಇದರ ಬಗ್ಗೆ ತಕ್ಷಣ ಜಾಗ್ರತೆ ವಹಿಸಿ ನಿಮ್ಮ ಸರ್ಕಾರದ ಪ್ರತಿನಿಧಿಗಳನ್ನು ಜಿಲ್ಲಾಧಿಕಾರಿಗಳಪರಾಗಲೀ ಅಥವಾ ಇನ್ನಾರನ್ನಾದರೂ ಅಲ್ಲಿಗೆ ಕಳಿಸಿ. ತಾವು ಈ ವಿಚಾರದಲ್ಲಿ ತಕ್ಷಣ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು, ಆ ನಂತರ ೧೫ನೇ ತಾರೀಖಿಗೆ ಡೀಟೇಲ್ ಉತ್ತರ ಕೊಡಿ.

ಶ್ರೀ ಜೆ. ಹೆಚ್. ಪಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವ ವಿಷಯದ ಬಗ್ಗೆ ಪರಿಶೀಲನೆ ಮಾಡಿ, ಅಲ್ಲಿಗೆ ತಕ್ಷಣ ಅಧಿಕಾರಿಗಳನ್ನು ಕಳುಹಿಸುವುದಕ್ಕೆ ಹೇಳುತ್ತೇನೆ. ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕಳಿಸಲು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತೇನೆ. ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ಅವರು ವಿವರ ಕೊಡುತ್ತಾರೆ:

ನಿಯಮ ೩೩ಳಿರ ಮೇರೆಗೆ

೧) ಸವದತ್ತಿ ತಾಲ್ಲೂಕು ಮರಕಂಬಿ ಗ್ರಾಮದಿಂದ ಕಾರಿಮನಿವರೆಗೆ ರಸ್ತೆಯನ್ನು ನಿರ್ಮಿಸುವ ಬಗ್ಗೆ

ಶ್ರೀ ಶಿವಾನಂದ ಎಚ್. ಕೌಜಲಗಿ. (ಬೈಲ ಹೊಂಗಲ).—ಮಾನ್ಯ ಅಧ್ಯಕ್ಷರೇ. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕ್ ಪೈಕಿ ಮರಕುಂಬಿ ಗ್ರಾಮದಿಂದ ಕಾರಿಮನಿವರೆಗೆ ವಾಯೂ ಚಿಕ್ಕೊಪ್ಪ ರಸ್ತೆಯಂ ಇರುವುದಿಲ್ಲ. ಈ ರಸ್ತೆಯನ್ನು ಮಾಡುವುದರಿಂದ ಅತೀ ಹಿಂದುಳಿದ ಪ್ರದೇಶದ ಜನರಾದ ಕಾರಿಮನಿ ಜನರಿಗೆ ಅನುಕೂಲವಾಗುವುದು. ಈ ಊರು ಪಶ್ಚಿಮ ಘಟ್ಟ ಅಡಿಯಲ್ಲಿ ಬರುವುದು. ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟ ಅಡಿಯಲ್ಲಿ ಖರ್ಚಾಗದೇ ಉಳಿದಿರುವ ಹಣದಲ್ಲಿ ಆಗಲಿ ಅಥವಾ ಮುಂದಿನ ವರ್ಷದ ಪಶ್ಚಿಮ ಘಟ್ಟದ ಯೋಜನೆಯಲ್ಲಿ ' ಈ ಕೆಲಸ ತೆಗೆದುಕೊಂಡಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅತೀ ಅವಶ್ಯವಿದ್ದುದ್ದರಿಂದ ಈ ಕೆಲಸ ತೆಗೆದುಕೊಳ್ಳಬೇಕೆಂದು ನಾನು ಗ್ರಾಮೀಣ ಅಭಿವೃದ್ಧಿ ಸಚಿವರ ಗಮನವನ್ನು ತಮ್ಮ ಮುಖಾಂತರ ಸೆಳೆಯುತ್ತೇನೆ.

ಶ್ರೀ ಸಿದ್ಧರಾಮಯ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ಸದಸ್ಯರಿಗೆ ತರಿಸಿ ಕೊಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ (ಅಬ್ಸೆಂಟ್)

೨) ಬಂಟ್ವಾಳ ತಾಲ್ಲೂಕಿನಲ್ಲಿ ವಿದ್ಯುತ್ ಬಳಕೆದಾರರ ಸಹಕಾರಿ ಸಂಘವನ್ನು ಸ್ಥಾಪನೆ ಮಾಡುವುದು

ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಂ ಬಂಟ್ವಾಳ ತಾಲ್ಲೂಕಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ಸಹಕಾರದಿಂದ ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಮಾದರಿಯಲ್ಲಿ ವಿದ್ಯುತ್ ಬಳಕೆದಾರರ ಸಹಕಾರಿ ಸಂಘವನ್ನು ಸ್ಥಾಪನೆ ಮಾಡಲು ಸರಕಾರ ತೀರ್ಮಾನ ಮಾಡಿತ್ತು. ಈ ಸಂಘದ ಸ್ಥಾಪನೆ ಮಾಡುವರು ಚೀಫ್ ಪ್ರಮೋಟರ್ ಆಗಿ ನಮ್ಮ ಜಿಲ್ಲೆಯ ಹಿರಿಯ ಸಹಕಾರಿ ಧುರೀಣರಾದ ಮಾನ್ಯ ಶ್ರೀ ಬಂಟ್ವಾಳ ನಾರಾಯಣ ನಾಯಕರ ನಾಯಕತ್ವದಲ್ಲಿ ಸುಮಾರು ೩೦, ೦೦೦ (ಮೂವತ್ತು ಸಾವಿರ) ಪಾಲು ಬಂಡವಾಳವನ್ನು ಬಳಕೆ ದಾರರಿಂದ ಒಟ್ಟು ಮಾಡಲಾಗಿತ್ತು. ಈ ಸಂಘಕ್ಕೆ ಸರಕಾರ ಜಲ್ಲಾಧಿಕಾರಿಯವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಕೆಲವು ಜನ ನಿರ್ದೇಶಕರನ್ನು ನಾಮಕರಣ ಮಾಡಲಾಗಿತ್ತು. ಆದರೆ ಈ ಸಂಘವು ಇನ್ನೂ ಪ್ರಾರಂಭ ಹಂತದಲ್ಲಿಯೇ ಇರುವುದು ಶೋಚನೀಯ ಸಂಗತಿಯಾಗಿದೆ. ಆದುದರಿಂದ ಇದನ್ನು ಜೀವಂತಗೊಳಿಸುವರೆಂದು ಮಾನ್ಯ ವಿದ್ಯುತ್ ಸಚಿವರು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೀಲ್.—ಮಾನ್ಯ ಅಧ್ಯಕ್ಷರೇ, ಇದು ಕೋ-ಆಪರೇಟೀವ್ ಮಂತ್ರಿಗಳಿಗೆ ಹೋಗುತ್ತದೆ.

ಶ್ರೀ ಬಿ. ರಮಾನಾಥ ರೈ.—ಕಳೆದ ಸಾರಿ ಸಹಕಾರ ಮಂತ್ರಿಗಳನ್ನು ಕೇಳಿದಾಗ ಇದು ತಮ್ಮ ಇಲಾಖೆಗೆ ಬರುತ್ತದೆಂದು ಹೇಳಿದ್ದರು.

ಅಧ್ಯಕ್ಷರು.—ಅವರು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆಂದು ಹೇಳಿದ್ದಾರೆ.